ದಿನಾಂಕ 04-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಅನುಮತಿಯ ಮೇರೆಗೆ ಮುಂದುವರೆದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

11. ನಿಪಿ-11 & 12 ನ್ನು ನಮ್ಮ ಇಲಾಖೆಯವರು ಕೊಟ್ಟಿದ್ದರು. ಸದರಿ ದಾಖಲೆ ಈ ಕೇಸಿನಲ್ಲಿ ಹೇಗೆ, ಯಾರಿಂದ, ಏಕೆ ಬಂದಿತ್ತು ಎಂದರೆ ಸಾಕ್ಷಿಯು ಅಂಚೆ ನಿರೀಕ್ಷಕರು ಸಿಂಧನೂರು ರವರು ಪಡೆದು ಕೊಂಡಿರುತ್ತಾರೆ ಎನ್ನುತ್ತಾರೆ. ನಾನು ನಿಪಿ-11 & 12 ನ್ನು ಪಡೆದಿರುವುದಿಲ್ಲ. ನಿಪಿ-11 ನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿಂಧನೂರು ರವರು ಅಟೆಸ್ಟ್ ಮಾಡಿರುತ್ತಾರೆ. ನಿಪಿ-11 ರ ಮೂಲ ಪ್ರತಿ ಇಲ್ಲದೆ ಅಟೆಸ್ಟ್ ಮಾಡುವುದಿಲ್ಲ ಎಂದರೆ ಸರಿ. ನಿಪಿ-11 ರ ಮೂಲ ಪ್ರತಿಯನ್ನು ಏಕೆ ನ್ಯಾಯಾಲಯಕ್ಕೆ ಕೊಡಲಿಲ್ಲ ಎಂದರೆ ಸಾಕ್ಷಿಯು ಆ ಸಮಯಕ್ಕೆ ನಾನು ಇರಲಿಲ್ಲ ಎನ್ನುತ್ತಾರೆ.

12. ಕೇವಲ ಕೇಸಿಗೆ ಅನುಕೂಲ ಆಗಲಿ ಎಂದು ಸದರಿ ದಾಖಲೆಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ-11 ಎ & 12 ಎ ದಾಖಲೆಗಳು ಈ ಕೇಸಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನೀವು ದಾಖಲೆಯನ್ನು ಪಡೆದೇ ಇಲ್ಲ, ಆದ್ದರಿಂದ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

2011 ರಲ್ಲಿ ಆರೋಪಿಯ ಮೇಲೆ ತನಿಖೆ ಆಗಿದ್ದು, ಆ ಕಾಲಕ್ಕೆ ರೂ.13,595/- ಹಣವನ್ನು ಮರು ಪಾವತಿ ಮಾಡಿಸಿಕೊಂಡಿದ್ದೀರಿ ಎಂದರೆ ಸರಿ. ಆ ದಾಖಲೆ ಇದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು **ನಿಡಿ-1** ಎಂದು ಗುರುತಿಸಲಾಯಿತು. ಆ ಹಣವನ್ನು ಏನು ಮಾಡಿದ್ದೀರಿ ಎಂದರೆ ಸಾಕ್ಷಿಯು ಅವರು ಫಲಾನುಭವಿಗಳು ಅರ್ಹರಿದ್ದರೆ ಹಣ ನೀಡುತ್ತೇವೆ ಇಲ್ಲವಿದ್ದರೆ ಅವರ ನಾಮಿನಿದಾರರಿಗೆ ಕೊಡುತ್ತೇವೆ ಎನ್ನುತ್ತಾರೆ. ಸದರಿ ಹಣ ನಿಮ್ಮ ಇಲಾಖೆಯಲ್ಲಿ ಈಗಲೂ ಇದೆಯೇ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

13. ಆ ರೀತಿ ಆರೋಪಿ ಅಪರಾಧ ಮಾಡಿದ್ದರೆ ಆರೋಪಿಯಿಂದ ಪಡೆದ ಹಣವನ್ನು ಫಲಾನುಭವಿಗಳಿಗೆ ಕೊಡುತ್ತಿದ್ದಿರಿ, ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆದ್ದರಿಂದ ಆ ಹಣವನ್ನು ಯಾವ ಫಲಾನುಭವಿಗಳಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಬಂದು ಕೇಳಿದರೆ ಕೊಡುತ್ತೇವೆ ಎನ್ನುತ್ತಾರೆ.

14. ಘಟನೆ 2010 ರಲ್ಲಿ ಆದಂತೆ ನೀವು ದೂರು ದಾಖಲಿಸಿದ್ದೀರಿ ಎಂದರೆ ಸರಿ. ಆದರೆ ನೀವು ದೂರನ್ನು ದಿ.09-05-2016 ರಂದು ದಾಖಲಿಸಿದ್ದೀರಿ ಏಕೆ ತಡವಾಯಿತು ಎಂದರೆ ಸಾಕ್ಷಿಯು

ಪಾರ್ಟಿಗಳ ಹೇಳಿಕೆ ಪಡೆಯಲು & ನಮ್ಮ ಹಿರಿಯ ಅಧಿಕಾರಿಗಳಿಂದ ಲಿಖಿತ ಹೇಳಿಕೆ ಪಡೆಯಲು, ಸಂಬಂಧಿಸಿದ ದಾಖಲೆಗಳನ್ನು ಪಡೆಯಲು ತಡವಾಯಿತು ಎನ್ನುತ್ತಾರೆ.

15. 2011 ರಲ್ಲಿಯೇ ಎಲ್ಲಾ ವಿಚಾರಣೆ ಮುಗಿದಿರುತ್ತದೆ ಎಂದರೆ ಸಾಕ್ಷಿಯು ಕಛೇರಿಯ ಕರೆಸ್ಪಾಂಡೆನ್ಸ್ ಬಾಕಿ ಇತ್ತು ಎನ್ನುತ್ತಾರೆ. ನೀವು ಕಛೇರಿಯಲ್ಲಿ ಯಾವುದೇ ಕರೆಸ್ಪಾಂಡೆನ್ಸ ಮಾಡಿಲ್ಲ ಎಂದರೆ ಸರಿಯಲ್ಲ.

16. ಆರೋಪಿ ಬಿಪಿ ಪೇಷೆಂಟ್ ಇದ್ದು, ಆಗಾಗ್ಗೆ ರಜೆಗಳನ್ನು ಕೇಳುತ್ತಿದ್ದರು, ಆದ್ದರಿಂದ ಅವರನ್ನು ಕೆಲಸದಿಂದ ತೆಗೆದುಹಾಕುವ ಸಲುವಾಗಿ ಈ ರೀತಿ ಸೃಷ್ಟಿಸಿ, ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸರಿಯಲ್ಲ.

17. ಸಾಮಾನ್ಯವಾಗಿ ಯಾವುದೇ ಸಿಬ್ಬಂದಿ ಹಣ ದುರುಪಯೋಗ ಮಾಡಿಕೊಂಡಿದ್ದರೆ ಸದರಿ ಹಣವನ್ನು ರಿಕವರಿ ಮಾಡಿಕೊಂಡು, ನಿಮ್ಮ ಇಲಾಖೆಯಲ್ಲಿಯೇ ಕೇಸನ್ನು ಕೊನೆಗೊಳಿಸುವಂತೆ ಆದೇಶ ಇದೆ ಎಂದರೆ ಸಾಕ್ಷಿಯು ರೂ.5,000/- ಕ್ಕಿಂತ ಜಾಸ್ತಿ ಹಣ ದುರುಪಯೋಗ ಮಾಡಿಕೊಂಡರೆ ಕೇಸು ಮಾಡಬೇಕು ಎಂದಿದೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**